**ಪಿಡಬ್ಲ್ಯೂ-1**

**ದಿನಾಂಕ 08.02.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

ಪಾಟಿ ಸವಾಲು ತೀರ್ಪುಋಣಿ ಪರ ಶ್ರೀ ಡಿ ಆರ್ ಕೆ. **ವಕೀಲರಿಂದ**ಃ

ನಾನು ತೀರ್ಪುಋಣಿ ವಿರುದ್ದ ಅ ದಾ ಸಂ 295/2018 ರಂತೆ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ತೀರ್ಪುಋಣಿಗಳ ವಿರುದ್ದ ಏಕಪಕ್ಷೀಯ ತೀರ್ಪನ್ನು ಪಡೆದಿರುತ್ತೇನೆ ಎಂದರೆ ಸರಿ. ಸದರಿ ಏಕಪಕ್ಷೀಯ ತೀರ್ಪನ್ನು ವಜಾ ಮಾಡಲು ಕೋರಿ ತೀರ್ಪುಋಣಿಯವರು ಮಿಸ್ ನಂಬರ 11/2023 ರಂತೆ ಅರ್ಜಿ ದಾಖಲಿಸಿರುತ್ತಾರೆ ಎಂದರೆ ಸರಿ. ನಾನು ತೀರ್ಪುಋಣಿಯರಿಗೆ ಯಾವುದೇ ನೋಟಿಸನ್ನು ನೀಡದೇ ಏಕಪಕ್ಷೀಯ ತೀರ್ಪನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ, ತೀರ್ಪುಋಣಿಯವರು ನಮಗೆ ಯಾವುದೇ ಆನ್ ಡಿಮ್ಯಾಂಡ್ ಪ್ರೊನೋಟಗಳನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಡಿಕ್ರಿ ಮೊತ್ತವನ್ನು ತೀರ್ಪುಋಣಿಯರು ಕೊಡುವಷ್ಟು ಆರ್ಥಿಕ ಸಾಮರ್ಥ್ಯ, ಹೊಂದಿರುವುದಿಲ್ಲ, ಅವರು ಯಾವುದೇ ದಾಖಲೆಗಳನ್ನು ನನಗೆ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

2. ನಿಪಿ-1 ದಾಖಲೆಯು ತೀರ್ಪುಋಣಿಯರ ಹೆಸರಿನಲ್ಲಿರುವುದಿಲ್ಲ, ಆ ಆಸ್ತಿಗೂ ಅವರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸಾಕ್ಷಿಯು ಅವರ ತಂದೆಯಾದ 1 ನೇ ತೀರ್ಪುಋಣಿಯ ಹೆಸರಿನಲ್ಲಿರುತ್ತದೆ ಎಂದು ನುಡಿದರು. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಪಹಣಿ ಪತ್ರಗಳಲ್ಲಿರುವ ಸ್ವತ್ತು ತೀರ್ಪುಋಣಿಗಳ ಸ್ವಯಾರ್ಜಿತ ಸ್ವತ್ತುಗಳು ಅಲ್ಲ, ಅದು ಅವರ ಪಿತ್ರಾರ್ಜಿತ ಸ್ವತ್ತು ಅದನ್ನು ಜಪ್ತಿ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

ಮುಂದುವರಿದ ತೀರ್ಪುಧಣಿ ಪರ ವಿಚಾರಣೆ ಇಲ್ಲ ಎಂದು ನುಡಿದಿರುತ್ತಾರೆ.

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.**

**ಸಾ.ಓ.ಹೇ.ಸ.ಇದೆ.**

2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
**ಪಾಂಡವಪುರ.**